SRI. B. B. SAYANAK.—When there is a very huge profit in this factory why are you giving this Bamboo at a very cheap rate, what are the reasons for this ?

SRI. S. M. KRISHNA.—I am not aware as to the quantum of profit that this company has made. If the hon. member put a separate question then I can provide him with the answer.

ಶ್ರೀ ಡಿ. ಹುಲಗೇಗೌಡ.—ಹಾಸನ ಜಿಲ್ಲೆಯಲ್ಲಿ ಸಾವಿರಾರು ಎಕರೆಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಯುತ್ತಿದ್ದಾರೆ. ಹಾಸನ ಜಿಲ್ಲೆಯು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯಾಗಿದೆ. ಆದ್ದರಿಂದ ಹಾಸನದಲ್ಲಿ ಒಂದು ಪಾಲಿಫೈಬರ್ ಫ್ಯಾಕ್ಟರಿಯನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಬಿಲ್ಲಿ ಕೈಗಾರಿಕೆಯನ್ನು ಹಾಕತಕ್ಕಂಥಾ ಪುಣ್ಯಾತ್ಮರನ್ನು ಯಾರನ್ನಾದರೂ ಕರೆದುಕೊಂಡು ಬಂದರೆ ಅವರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತೇವೆ.

ಶ್ರೀ ಬಿ ಪುಟ್ಟಸ್ವಾಮಯ್ಯ.—ಪ್ರತಿವರ್ಷ ಈ ಕಾರ್ಖಾನೆಗೆ ನೀಲಗಿರಿ ಮರಗಳನ್ನು ಕಡಿಯುವುದಕ್ಕೆ ಒಪ್ಪಂದವಾಗಿರುವುದರಿಂದ ಈಗ ಆ ಮರಗಳನ್ನು ಕಡಿಯುವ ಪ್ರಮಾಣದಷ್ಟೇ ಹೊಸದಾಗಿ ನೀಲಗಿರಿ ಮರಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ. ಸಾಕಷ್ಟು ಅರಣ್ಯವನ್ನು ಅಭಿವೃದ್ಧಿ ಮಾಡಬೇಕೆಂದು ಪ್ರಯತ್ನಗಳು ನಡೆಯುತ್ತಿವೆ.

GENERAL HOSPITAL AT RAJAJINAGAR

312 SRI. M. S. KRISHNAN.—(Malleswaram)

Will the Minister for Health be pleased to state:—

(*a*) whether Government has received representations from the residents of Rajajinagar, Bangalore as well as from the M.L.A. of the Constituency that a General Hospital with sufficient bed strength be constructed in Rajajinagar or a nearby place to serve the needs of the residents of the locality;

(*b*) if so, the action taken by the Government in the matter;

(*c*) the criteria or principles adopted by Government in sanctioning and constructing a General Hospital ?

SRI H. SIDDAVEERAPPA.—(Minister for Health)

(*a*) Yes.

(*b*) The matter is under consideration of Government in Municipal Administration Department.

(*c*) The construction of General Hospital in cities is based on the needs of the population of the locality.

ಶ್ರೀ ಎಂ. ಎಸ್. ಕೃಷ್ಣನ್:—ಸ್ವಾಮಿ ತಾವು ನನ್ನ (ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ ಅದು ಸರ್ಕಾರದವರ ನಿರ್ಲಕ್ಷಿತ ಇಲಾಖೆಯವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದರ ಅರ್ಥವೇನು? ಈ ರಾಜಾಜಿನಗರ ಬಡಾವಣೆಯಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ನಿರ್ಮಿಸುವ ಬಗ್ಗೆ ತೊಂದರೆಗಳು ಏನಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ:—ಅದು ಹಾಗಲ್ಲ. It is one of their obligatory duties to provide medical aid within the Corporation area. Therefore the Government has asked the Corporation to provide medical aid and the Corporation has said that they are ceased of the matter and they would look into it and provide the same.

ಶ್ರೀ ಎಂ. ಎಸ್. ಕೃಷ್ಣನ್:—ಇದು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಕಾರ್ಪೋರೇಷನ್ ನವರ ಮೇಲೆ ಹಾಕಿ ಅವರು ನಮ್ಮಲ್ಲಿ ಹಣವಿಲ್ಲ ಎಂದು ಹೇಳಿ ಅವರು ತಪ್ಪಿಸಿಕೊಂಡು ಕೊನೆಗೆ ಜನಗಳಿಗೆ ತೊಂದರೆಯುಂಟಾಗುವ ಪರಿಸ್ಥಿತಿ ಬಂದಿದೆ. ಈಗಾಗಲೇ ಆಲ್ಲಿ ಜನರಲ್ ಆಸ್ಪತ್ರೆಗೆ ಬೇಕಾದ ವಿಶಾಲ ಜಾಗ ಇದೆ. ಈ ಬಡಾವಣೆ ಬೃಹದಾಕಾರವಾಗಿ ಬೆಳೆಯುತ್ತಿದೆ. ಅಲ್ಲಿ ೨೧ ಲಕ್ಷ ಜನ ಇದ್ದಾರೆ. ಅಲ್ಲಿ ಒಂದು ಜನರಲ್ ಆಸ್ಪತ್ರೆಯನ್ನು ಅವಶ್ಯಕವಾಗಿ ಕಟ್ಟಬೇಕು. ಆದ್ದರಿಂದ ಸರಕಾರದವರು ಆ ಬಗ್ಗೆ ಗಮನಕೊಟ್ಟು ತಕ್ಷಣ ಒಂದು ಜನರಲ್ ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ:—ಆಲ್ಲಿ ಒಂದು ಜನರಲ್ ಆಸ್ಪತ್ರೆಯ ಅವಶ್ಯಕತೆ ಇದೆ ಎನ್ನುತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ, ನಮ್ಮ ಡೈರೆಕ್ಟರು ಅದಕ್ಕೆ ಶಿಫಾರಸ್ಸು ಮಾಡಿದ್ದಾರೆ. ಅಲ್ಲಿಗೆ ೧೫೦ ಹಾಸಿಗೆಯುಳ್ಳ ಒಂದು ಆಸ್ಪತ್ರೆ ಬೇಕು. ಆದ್ದರಿಂದ ಕಾರ್ಪೋರೇಷನ್ನಿನವರಿಗೆ ಬೇರೆ ಜಾಗ ಇಲ್ಲದಿದ್ದರೆ ಸರ್ಕಾರದ ಜಾಗ ಇದೆ. ನೀವು ಆಸ್ಪತ್ರೆಯನ್ನು ಕಟ್ಟುವುದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಕಾರ್ಪೋರೇಷನ್ನಿನವರು ಈ ಆಸ್ಪತ್ರೆಯನ್ನು ಕಟ್ಟಿಸುವುದಕ್ಕೆ ನಮ್ಮ ಕೈಯ್ಯಲ್ಲಿ ಆಗುವುದಿಲ್ಲ ಎಂದು ಹೇಳಲಿಲ್ಲ. ಅವರು ನಾವು ಅದನ್ನು ನೋಡುತ್ತಿದ್ದೇವೆ, ವಿಚಾರ ಮಾಡುತ್ತಿದ್ದೇವೆ ಎಂದು ನಿರ್ಲಿಪ್ತ ಭಾವ ಇಷಯಿಯಿಂದಲೂ ಹೇಳುತ್ತಿದ್ದಾರೆ. ಆದ್ದರಿಂದ ಕಾರ್ಪೋರೇಷನ್ನಿನವರು ಯಾವಾಗ ಮನಸ್ಸು ಮಾಡುತ್ತಾರೆಯೋ ಆಗ ಆಸ್ಪತ್ರೆಯಾಗುತ್ತದೆ. ಅದು ಶ್ರೀಮಾನ್ ಶಾಮಣ್ಣನವರ ಮೇಲೆ ನಿಂತಿದೆ.

ಶ್ರೀ ಕೆ. ಶ್ರೀರಾಮುಲು:—ಈ ಸಂಬಂಧದಲ್ಲಿ ಕಳೆದ ಏಪ್ರಿಲ್ ೨೧ ನೇ ತಾರೀಖು ರಾಜಾಜಿನಗರದಲ್ಲಿ ಸರ್ಕಾರದ ವತಿಯಿಂದಾಗಲೀ, ಕಾರ್ಪೋರೇಷನ್ ವತಿಯಿಂದಾಗಲೀ ಒಂದು ಜನರಲ್ ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕೆಂದು ನಾವು ತಮಗೆ ಒಂದು ಪತ್ರವನ್ನು ಬರೆದಿದ್ದೇವೆ, ತಾವು ಅದನ್ನು ನೋಡುತ್ತೇವೆ ಎಂದು ಹೇಳಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಕೂಡಿ ಈ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದಂದ ರಾಜಾಜಿನಗರದಲ್ಲಿ ಕಾರ್ಪೋರೇಷನ್‌ನಿಂದಲೋ ಅಥವಾ ಸರ್ಕಾರದ ವತಿಯಿಂದಲೋ ಆದಷ್ಟು ಜಾಗ್ರತೆ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ:—ನಾನು ಈಗಾಗಲೇ ಅರಿಕೆ ಮಾಡಿದ್ದೇನೆ. ಈ ವಿಷಯವನ್ನು ನಾನು ಮತ್ತೊಂದು ಸಾರಿ ಕಾರ್ಪೋರೇಷನ್ನಿನವರಿಗೆ ತಿಳಿಸುತ್ತೇನೆ ಆದಷ್ಟು ಜಾಗ್ರತೆ ಮಾಡಬೇಕು ಎಂದು.

ಶ್ರೀ ಟಿ. ಆರ್. ಶಾಮಣ್ಣ:—ಸ್ಯಾನಿಟರಿ ಮತ್ತು ಹೆಲ್ತ್ ಕಂಡೀಷನ್ಸ್, ನೋಡಿಕೊಳ್ಳಬೇಕು ಎಂದು ಕಾರ್ಪೋರೇಷನ್ ಆಕ್ಟಿನಲ್ಲಿ ಇದೆ. ಆಸ್ಪತ್ರೆಯನ್ನು ಕಾರ್ಪೋರೇಷನ್ನಿನವರು ರನ್ ಮಾಡಬೇಕು ಎಂದು ಆಕ್ಟಿನಲ್ಲಿ ಇಲ್ಲ, ತಾವು ದಯವಿಟ್ಟು ಆಕ್ಟನ್ನು ಪರಿಶೀಲನೆ ಮಾಡಬೇಕು. ಕಾರ್ಪೋರೇಷನ್ನಿನವರು ಸುಮಾರು ೬ ಲಕ್ಷ ರೂಪಾಯಿ ಮಂಡಿಕಲ್ ಸೆಸ್ಸನ್ನು ಸರ್ಕಾರಕ್ಕೆ ಕಟ್ಟುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ:—ಇದರ ಜೊತೆಗೆ ಕಾರ್ಪೋರೇಷನ್ ಆಫೀಸರು ತಮ್ಮ ಕರ್ತವ್ಯವಲ್ಲದಿದ್ದರೂ ಸಹ ೧೮ ಹೆರಿಗೆ ಆಸ್ಪತ್ರೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಎಲ್ಲ ಕಾರಣದಿಂದ ರಾಜಾಜಿನಗರದಲ್ಲಿ ಸರ್ಕಾರದವರೇ ಸಾರ್ವಜನಿಕ ಆಸ್ಪತ್ರೆಯನ್ನು ನಿರ್ಮಿಸುವುದಕ್ಕೆ ಒಪ್ಪುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು.

ಶ್ರೀ ಎಚ್. ಸಿದ್ಧವೀರಪ್ಪ:—Health includes medical aid also. ಆದ್ದರಿಂದ ಹೆಲ್ತ್ ಅಂಡ್ ಸ್ಯಾನಿಟೇಷನ್ ಎರಡೂ ಸಹ ಕಾರ್ಪೋರೇಷನ್ನಿಗೆ ಸೇರಿದ್ದು. ಈಗ ಹೆಲ್ತ್‌ಸೆಸನ್ನು ಕಾರ್ಪೋರೇಷನ್ ಅವರೇ ತೆಗೆದುಕೊಳ್ಳುತ್ತಿದ್ದಾರೆ. ಇದು ನಮ್ಮ ಜವಾಬ್ದಾರಿಯಲ್ಲ ಎಂಬುದಾಗಿ ಇದುವರೆಗೆ ಕಾರ್ಪೋರೇಷನ್ ಅವರು ನಮಗೆ ತಿಳಿಸಿಲ್ಲ. ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಸರ್ಕಾರದವರು ಈಗ ಬೆಂಗಳೂರಿನಲ್ಲಿ ಮೂರು ಜನರಲ್ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ನಮ್ಮಲ್ಲಿರತಕ್ಕಂಥ ಅಲ್ಪ ಹಣದಲ್ಲಿ ನಾವು ಇನ್ನು ಮುಂದೆ ಹಳ್ಳಿಗಳ ಕಡೆಗೆ ಗಮನ ಕೊಡಬೇಕಾಗಿದೆ. ಪಟ್ಟಣಗಳ ಕಡೆಗೆ ಗಮನ ಕೊಡುವುದಕ್ಕಿಂತ ಹೆಚ್ಚಾಗಿ ಇನ್ನು ಮುಂದೆ ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ತೆರೆಯುವ ಕಡೆಗೆ ಗಮನ ಕೊಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ:—ರ್ಜಿಲೇನೇ ಇಸವಿಯಿಂದಲೂ ಕಾರ್ಪೋರೇಷನ್‌ನವರು ತಾವೇ ಇದನ್ನು ಕೈಕೊಳ್ಳುತ್ತೇವೆಂದು ಹೇಳುತ್ತಿದ್ದಾರೆಂದು ತಾವು ಅಪ್ಪಣೆ ಕೊಡಿಸಿದಿರಿ, ರ್ಜಿಲೇನೇ ಇಸವಿಯಲ್ಲಿ ಕಾರ್ಪೋರೇಷನ್ ಸರ್ಕಾರದ ಕೈಯಲ್ಲಿದ್ದೇ ಇತ್ತು. ಆಗ ಜನರ ಪ್ರತಿನಿಧಿಗಳು ಇರಲಿಲ್ಲ. ಆ ಸಮಯದಲ್ಲಿ ಸರ್ಕಾರದವರು ಇದರ ಕಡೆಗೆ ಏತಕ್ಕೆ ಗಮನ ಕೊಡಲಿಲ್ಲ ?

ಶ್ರೀ ಎಚ್. ಸಿದ್ಧವೀರಪ್ಪ:—ಆಗಿನ ಸರ್ಕಾರದ ಅಡ್ಮಿನಿಸ್ಟ್ರೇಟರ್ ಕೂಡ ಈ ಬಗ್ಗೆ ನೋಡುತ್ತೆವೆಂದು ಸರ್ಕಾರಕ್ಕೆ ಹೇಳಿದ್ದರು. ಆದರೆ ಮಾಡಲಿಲ್ಲ. ಈಗ ಕಾರ್ಪೋರೇಷನ್ ಅಸ್ಥಿತ್ವದಲ್ಲಿದೆ. ಅವರನ್ನೂ ಕೇಳಿದ್ದೇವೆ. ಈಗ ಮತ್ತೊಂದು ಸಲ ಇದರ ಅವಶ್ಯಕತೆ ಜಾಸ್ತಿ ಇದೆ, ತ್ವರಿತವಾಗಿ ಮಾಡಬೇಕೆಂಬುದಾಗ್ಗಿ ಬರೆಯುತ್ತೇನೆ. ಮಂತ್ರಿ ಸಂಬಂಧಪಟ್ಟ ಮಂತ್ರಿಗಳಿಗೂ ಒರೆಯುತ್ತೇನೆ.

CASH AWARD TO GOVERNMENT SERVANTS FOR PASSING HINDI EXAMINATION

425. SRI ANDANAIAH (Kunigal) .—

Will the Chief Minister be pleased to state :—

(*a*) whether there is any Government Order for granting cash awards of Rs. 100 to Government servants who have passed "Praveshika" Hindi Examination ,

(*b*) if so, the aim and purpose of the said Government Order ,

(*c*) the reasons for not giving the said awards to the Government officials who have passed the said examination prior to the issue of said Government Order ,

(*d*) the number of Government servants who have passed the requisite Hindi Examination after the issue of Government Order and the total number of Government servants who had passed the Hindi Examination prior to the issue of Government Order ,

the number of Government servants who had passed "Praveshika" in the first class prior to the issue of present Government Order and have been granted advance increments ?